**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಕೊರಟಗೆರೆ**

**ಸಿ.ಸಿ. ನಂ. 379/2019**

| | | |
|---|---|---|
| ಹೆಸರು | : ಉಮೇಶ್ | ಪಿಡಬ್ಲ್ಯೂ-3 |
| ತಂದೆಯ ಹೆಸರು | : ದೊಡ್ಡರಂಗಪ್ಪ | ಸಿಡಬ್ಲ್ಯೂ-11 |
| ವಯಸ್ಸು | : 63 ವರ್ಷ | |
| ವೃತ್ತಿ | : ಕೂಲಿ | |
| ವಾಸ ಸ್ಥಳ | : ಜಟ್ಟಿ ಅಗ್ರಹಾರ | |

**ದಿಃ 27.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:**

1. ಸಾಕ್ಷಿಯು ನಿಪಿ-2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಸುಮಾರು ಎರಡು ವರ್ಷಗಳ ಹಿಂದೆ ನಮ್ಮ ಗ್ರಾಮದಲ್ಲಿ ಪೋಲೀಸರ ಕೋರಿಕೆ ಮೇರೆಗೆ ಮಾಡಿರುತ್ತೇನೆ. ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ, ಪೊಲೀಸರು ನನಗೆ ಓದಿ ಹೇಳಿರುವುದಿಲ್ಲ, ನಾನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಪರಿಶೀಲಿಸಿ ಆಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

1. ದಿಃ 22.04.209 ರಂದು ಚಾಸಾ-18 ರವರು ಜಟ್ಟಿ ಅಗ್ರಹಾರ ಗ್ರಾಮದ ಸಮೀಪ ಬರಕ ಗ್ರಾಮಕ್ಕೆ ಹೋಗುವ ರಸ್ತೆ ಬಳಿ ದಿಃ 21.04.2019 ರಂದು ಲಕ್ಷ್ಮೀನರಸಯ್ಯರವರಿಗೆ ಆದ ಅಪಘಾತದ ವಿಚಾರವಾಗಿ ಮಹಜರ್ ಗೆ ಬಂದಿದ್ದು ನನ್ನನ್ನು ಮತ್ತು ಚಾಸಾ-10 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅಪಘಾತದ ವಿಚಾರವನ್ನು ನಮಗೆ ತಿಳಿಸಿ ಮಹಜರ್ ಗೆ ಸಹಕರಿಸುವಂತೆ ಕೋರಿದ್ದರ ಮೇರೆಗೆ ನಾವು ಒಪ್ಪಿರುತ್ತೇವೆಂದರೆ ಸರಿಯಲ್ಲ. ನಂತರ ಚಾಸಾ-2 ರವರು ಅಪಘಾತ ಸ್ಥಳವನ್ನು ತೋರಿಸಿದ್ದು, ಅಪಘಾತ ಸ್ಥಳದಲ್ಲಿ ಅಪಘಾತದಲ್ಲಿ ಭಾಗಿ ಆಗಿದ್ದ KA-06-EG-535 ದ್ವಿಚಕ್ರವಾಹನವನ್ನು ಚಾಸಾ-2 ರವರು ತಂದು ಹಾಜರುಪಡಿಸಿದ್ದು, ಸದರಿ ವಾಹನದ ಹಿಂಭಾಗ

ಮತ್ತು ಮುಂಭಾಗ ಜಖಂಗೊಂಡಿದ್ದು, ಸದರಿ ವಾಹನವನುನ ಚಾಸಾ-18 ರವರು ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದುಕೊಂಡು ನಿಪಿ-2 ರಂತೆ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಕಚ್ಚಾ ನಕಾಶೆಯನ್ನು ತಯಾರಿಸಿ ನನ್ನ ಹಾಗೂ ಚಾಸಾ-10 ರವರ ಸಹಿಗಳನ್ನು ನಿಪಿ-2 ಕ್ಕೆ ಪಡೆದಿರುತ್ತಾರೆಂದರೆಸ ರಿಯಲ್ಲ. ನಿಪಿ-2 ರ ಸಮಯದಲ್ಲಿ ಭಾವಚಿತ್ರವನ್ನು ತೆಗೆದಿರುತ್ತಾರೆಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ನನಗೆ ಗೊತ್ತಿಲ್ಲದ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಪರ ವಕೀಲರಿಂದ** ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಿ.ಜೆ.ಮತ್ತು ಪ್ರ.ದ.ನ್ಯಾ.ದಂ
ಕೊರಟಗೆರೆ